**ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿ.ಸಿ. ನಂ. 3231/2021**

| | | | |
|---|---|---|---|
| **ಹೆಸರು** | : | **ಮರಿಲಿಂಗಪ್ಪ** | **ಚಾ.ಸಾ. 1** |
| **ತಂದೆಯ ಹೆಸರು** | : | **ಮಲ್ಲಪ್ಪ** | **ಪ್ರಾ.ಸಾ. 1** |
| **ವಯಸ್ಸು** | : | **28 ವರ್ಷ** | **ದಿನಾಂಕಃ 15-04-2025** |
| **ಉದ್ಯೋಗ** | : | **ಪೊಲೀಸ್ ಪೇದೆ** | |
| **ವಾಸಸ್ಥಳ** | : | **ಸುಲೇಪೇಟ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

2018 ರಿಂದ 2024 ರವರೆಗೆ ಚಿಂಚೋಳಿ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕಾರ್ಯ ನಿರ್ವಹಿಸಿದ್ದೇನೆ.

ದಿನಾಂಕ 24-02-2020 ರಂದು ರಾತ್ರಿ 11-30 ಗಂಟೆಗೆ ಗಣೇಶ ಹಬ್ಬದ ಪ್ರಯುಕ್ತ ಚಿಂಚೋಳಿ ಪಟ್ಟಣದಲ್ಲಿ ಗಸ್ತು ಮುಗಿಸಿಕೊಂಡು ನಾನು ಹಾಗೂ ಚಾಸಾ-4 ರವರು ಚಂದಾಪೂರದ ಕಡೆಗೆ ಜುನಿಯರ ಕಾಲೇಜು ಎದುರುಗಡೆಯಿಂದ ಹೋಗುತ್ತಿರುವಾಗ ಒಬ್ಬ ವ್ಯಕ್ತಿ ನಡೆದುಕೊಂಡು ಬರುತ್ತಿದ್ದ. ನಾವು ಆತನಿಗೆ ಅವನ ಹೆಸರು ಮತ್ತು ಅಲ್ಲಿ ಹೋಗುತ್ತಿರುವ ಬಗ್ಗೆ ಕೇಳಿದ್ದಕ್ಕೆ ಸದರಿ ವ್ಯಕ್ತಿ ನನ್ನ ಮನಸ್ಸಿಗೆ ಬಂದ ಕಡೆ ನಾನು ಹೋಗುತ್ತೇನೆ ನೀವು ಯಾರು ಕೇಳುವವರು ಎಂದು ಹೇಳಿರುತ್ತಾನೆ. ಆಗ ನಾವು ಆತನಿಗೆ ಈ ರೀತಿ ಮಾಡನಾಡುವುದು ಸರಿ ಅಲ್ಲ ಎಂದು ಹೇಳಿದ್ದಕ್ಕೆ ಸದರಿ ವ್ಯಕ್ತಿ ನನಗೆ ಚಿಂಚೋಳಿಯಿಂದ ವರ್ಗಾವಣೆ ಮಾಡಿಸುವುದಾಗಿ ಬೆದರಿಕೆ ಹಾಕಿರುತ್ತಾನೆ. ನಂತರ ಸದರಿ ವ್ಯಕ್ತಿ ನನಗೆ ಅವಾಚ್ಯ ಶಬ್ದಗಳಿಂದ ಬೈದು, ಎದೆಯ ಮೇಲಿನ ಅಂಗಿ ಹಿಡಿದು ಕೈಯಿಂದ ಕಪಾಳಕ್ಕೆ ಹೊಡೆದಿರುತ್ತಾನೆ. ಅಷ್ಟರಲ್ಲೆ ನನ್ನ ಜೊತೆ ಇದ್ದ ಚಾಸಾ-4 ರವರು ಬಿಡಿಸಿರುತ್ತಾರೆ. ನಂತರ ಚಾಸಾ-4 ರವರು ಕರೆ ಮಾಡಿ ಎಸ್.ಹೆಚ್.ಡಿ. ಕರ್ತವ್ಯದಲ್ಲಿದ್ದ ಸಿಬ್ಬಂದಿಗಳಿಗೆ ಕರೆಯಿಸಿ ಆರೋಪಿಗೆ ಠಾಣೆಗೆ ಕರೆದುಕೊಂಡು ಹೋಗಿರುತ್ತೇವೆ. ನಂತರ ನಾನು ದೂರನ್ನು ನೀಡಿರುತ್ತೇನೆ. ಆ ದಿನ ನನಗೆ ಅವಾಚ್ಯ ಶಬ್ದಗಳಿಂದ ಬೈದು ಹಲ್ಲೆ ಮಾಡಿರುವ ವ್ಯಕ್ತಿ ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿ ಆಗಿರುತ್ತಾನೆ.

ಆ ದಿನ ನಾನು ನೀಡಿರುವ ದೂರು ಈಗ ನೋಡುತ್ತಿದ್ದು, ಅದನ್ನಿಗ ನಿಪಿ-1 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಈ ನೋಡುತ್ತಿರುವ ಭಾವಚಿತ್ರಗಳಲ್ಲಿರುವ ಸ್ಥಳದಲ್ಲಿ

ಘಟನೆ ಆಗಿತ್ತು. ಸದರಿ ಭಾವ ಚಿತ್ರಗಳನ್ನು ನಿಪಿ-2 ಮತ್ತು 3 ಎಂದು ಗುರುತಿಸಲಾಯಿತು.

ಮರುದಿನ ಚಾಸಾ-14 ರವರಿಗೆ ದಿನಾಂಕ ಹಾಗೂ ಸಮಯದ ಕುರಿತು ಮರುಹೇಳಿಕೆ ನೀಡಿರುತ್ತೇನೆ. ಘಟನೆ ನಡೆದ 2-3 ದಿನಗಳ ನಂತರ ನಿಪಿ-2 ಮತ್ತು 3 ರ ಭಾವ ಚಿತ್ರಗಳನ್ನು ಪಡೆದಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ಬಿ.ಎಸ್. ವಕೀಲರಿಂದಃ**

ಯಾವ ಸಮಯಕ್ಕೆ ನಿಪಿ-2 ಮತ್ತು 3 ರ ಭಾವ ಚಿತ್ರಗಳನ್ನು ಪಡೆದಿದ್ದಾರೆಂದು ನನಗೆ ನೆನಪಿಲ್ಲ. ನಾನು ರಸ್ತೆಯ ಪೂರ್ವ ದಿಕ್ಕಿನಲ್ಲಿ ನಿಂತಾಗ ನಿಪಿ-2 ಮತ್ತು 3 ರ ಭಾವ ಚಿತ್ರಗಳನು ಪಡೆಯಲಾಗಿದೆ. ನಿಪಿ-2 ಮತ್ತು 3 ರ ಭಾವ ಚಿತ್ರಗಳನ್ನು ನೋಡಿದರೆ ಮಧ್ಯಾಹ್ನ ಸಮಯಕ್ಕೆ ಪಡೆದಂತೆ ಮತ್ತು ಬೆಳಿಗ್ಗೆ ಸಮಯಕ್ಕೆ ಪಡೆದಂತೆ ಇಲ್ಲ ಎಂದರೆ ಸಾಕ್ಷಿ ಸಮಯ ನನಗೆ ನೆನಪಿಲ್ಲ ಎನ್ನುತ್ತಾರೆ. ಯಾವ ಉದ್ದೇಶಕ್ಕಾಗಿ ನಿಪಿ-2 ಮತ್ತು 3 ರ ಭಾವ ಚಿತ್ರಗಳನ್ನು ಪಡೆಯಲಾಗಿದೆ ಎಂದು ನನಗೆ ಗೊತ್ತಿಲ್ಲ ಆದ್ದರಿಂದ ಸಮಯ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ಪ್ರಕರಣದ ಪ್ರ.ವ. ವರದಿಯನ್ನು ನಾನು ಓದಿದ್ದೇನೆ. ನನ್ನ ದೂರಿನಲ್ಲಿ ಆರೋಪಿ ಹೆಸರು ಉಲ್ಲೇಖ ಇಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಆರೋಪಿ ತನ್ನ ಹೆಸರು ಹೇಳಿರುವುದಿಲ್ಲ ಮತ್ತು ಠಾಣೆಯಲ್ಲಿ ವಿಚಾರಣೆ ಮಾಡಿದಾಗ ಹೆಸರು ಹೇಳಿರುತ್ತಾನೆ ಎಂದು ನುಡಿಯುತ್ತಾರೆ. ದೂರಿನಲ್ಲಿ ಆರೋಪಿ ಹೆಸರು ಉಲ್ಲೇಖ ಇಲ್ಲದೆ ಇರುವುದರಿಂದ ಪ್ರ.ವ. ವರದಿಯಲ್ಲಿ ಆರೋಪಿ ಹೆಸರು ಹೇಗೆ ಉಲ್ಲೇಖ ಆಯಿತು ಎಂದು ನೀವು ತನಿಖಾಧಿಕಾರಿಯವರಿಗೆ ಕೇಳಿದ್ದಿರಾ ಎಂಬ ಪ್ರಶ್ನೆಗೆ ಸಾಕ್ಷಿ ನೆನಪಿಲ್ಲ ಎಂದು ನುಡಿಯುತ್ತಾರೆ. ನನ್ನ ದೂರಿನಲ್ಲಿ ಆರೋಪಿ ನನ್ನ ಕರ್ತವ್ಯಕ್ಕೆ ಉಲ್ಲೇಖ ಇಲ್ಲ ಎಂಬ ಪ್ರಶ್ನೆಗೆ ಸಾಕ್ಷಿ ಆರೋಪಿ ನನ್ನ ಎದೆ ಅಂಗಿ ಹಿಡಿದು ಕಪಾಳಕ್ಕೆ ಹೊಡೆದಿರುತ್ತಾನೆ ಎಂದು ನುಡಿಯುತ್ತಾರೆ. ಈ ರೀತಿ ಕರ್ತವ್ಯಕ್ಕೆ ಅಡೆ-ತಡೆ ಮಾಡಿದ್ದಾರೆ ಎಂಬ ಪದವನ್ನು ನನ್ನ ದೂರಿನಲ್ಲಾಗಲಿ ಅಥವಾ ನನ್ನ ಮರುಹೇಳಿಕೆಯಲ್ಲಿ ಉಲ್ಲೇಖವಿಲ್ಲ ಎಂದರೆ ಸರಿ.

ಚಾಸಾ-4 ರವರು ನನಗೆ ಅಂದಾಜು ಘಟನೆ ನಡೆದ ದಿನಾಂಕದ ಒಂದು ವರ್ಷದ ಹಿಂದಿನಿಂದ ಪರಿಚಯವಿದ್ದರು. ಚಾಸಾ-4 ರವರನ್ನು ಚಿಂಚೋಳಿಯ ಪೋಲಿಸ್ ಠಾಣೆಯ ವಜಾ ಮಾಡಲಾಗಿತ್ತು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಚಾಸಾ-4 ರವರು ತಮ್ಮ ಹಿರಿಯ ಅಧಿಕಾರಿಯನ್ನು ದುರ್ವತನೆ ಮಾಡಿದ ಕಾರಣ ಅವರಿಗೆ ವಜಾ ಮಾಡಲಾಗಿತ್ತು ಮತ್ತು ಅವರು ಇದೇ ನ್ಯಾಯಾಲಯದಲ್ಲಿ ಖಾಸಗಿ ದೂರನ್ನು ಸಹ ಸಲ್ಲಿಸಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ.

ಘಟನೆ ನಡೆಯಿತು ಎನ್ನಲಾದ ಸಂದರ್ಭದಲ್ಲಿ ಕೊವಿಡ್ ಲಾಕ್ ಡೌನ್ ಹೇರಲಾಗಿತ್ತು ಮತ್ತು ಗುಂಪುನಲ್ಲಿ ಇರಬಾರದು ಎಂದು ಸರ್ಕಾರ ಷರತ್ತು ಹಾಕಿರುತ್ತದೆ ಎಂದರೆ ಸರಿ. ನಾನು ಮತ್ತು ಚಾಸಾ-4 ರವರು ಜೊತೆಯಾಗಿ ಇದ್ದ ಕಾರಣ ಕಾನೂನು ಬಾಹಿರ ಇರುತ್ತದೆ ಎಂದರೆ ಸಾಕ್ಷಿ ಗಣೇಶ ಮತ್ತು ಮೋಹರಂ ಹಬ್ಬ ಇದ್ದ ಕಾರಣ ಅಹಿತಕರ ಘಟನೆ ಆಗಬಾರದು ಎಂದು ನಮ್ಮಿಬ್ಬರಿಗೆ ಗಸ್ತು ಮಾಡಲು ನೇಮಿಸಿದ್ದರು ಎನ್ನುತ್ತಾರೆ. ಆ

ಸಂದರ್ಭದಲ್ಲಿ ಗಣೇಶ ಮತ್ತು ಮೋಹರಂ ಹಬ್ಬ ಆಚರಣೆ ಮಾಡಬಾರದು ಎಂದು ಸರ್ಕಾರದ ಆದೇಶ ಇತ್ತು ಎಂದರೆ ಸರಿ. ಆಗ ಹಬ್ಬ ಆಚರಣೆ ಮಾಡದೆ ಇದ್ದ ಕಾರಣ ಯಾವುದೇ ಅಹಿತಕರ ಘಟನೆ ಆಗುವ ಪ್ರಶ್ನೆಯೇ ಬರುವುದಿಲ್ಲ ಎಂದರೆ ಸಾಕ್ಷಿ ಈ ಪ್ರಕರಣಕ್ಕೆ ಸಂಬಂಧ ಇಲ್ಲ ಎಂದು ನುಡಿಯುತ್ತಾರೆ.

ಆರೋಪಿ ನನ್ನ ಕಪಾಳಕ್ಕೆ ಹೊಡೆದಿರುವ ಬಗ್ಗೆ ನಿಪಿ-1 ರ ದೂರಿನಲ್ಲಿ ಉಲ್ಲೇಖವಿಲ್ಲ ಎಂದರೆ ಸಾಕ್ಷಿ ಮುಖಕ್ಕೆ ಹೊಡೆದಿದ್ದಾನೆ ಎಂದು ನಮೂದು ಇದೆ ಎನ್ನುತ್ತಾರೆ. ಮುಖದ ಯಾವ ಭಾಗಕ್ಕೆ ಹಲ್ಲೆ ಮಾಡಿರುವ ಬಗ್ಗೆ ನಿಪಿ-1 ರಲ್ಲಿ ಉಲ್ಲೇಖ ಇಲ್ಲ ಎಂದರೆ ಸರಿ. ಘಟನೆ ಆಗುವ ಮೊದಲು ಆರೋಪಿ ನನಗೆ ಪರಿಚಯ ಇರಲಿಲ್ಲ. ಆಗ ನಾನು ಬಾಡಿಗೆ ವಸತಿ ಮನೆಯಲ್ಲಿ ವಾಸವಿದ್ದೆ. ಆರೋಪಿ ಪೊಲೀಸ್ ವಸತಿ ಗೃಹದ ಪಕ್ಕದಲ್ಲಿ ವಾಸಿಸುತ್ತಿದ್ದ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನನ್ನ ಪುರವಣಿ ಹೇಳಿಕೆಯಲ್ಲಿರುವ ಸಂಗತಿಗಳು ನನಗೆ ಗೊತ್ತಿದೆ. ನನ್ನ ಪುರವಣಿ ಹೇಳಿಕೆಯಲ್ಲಿ ಆರೋಪಿ ಪೊಲೀಸ್ ವಸತಿ ಗೃಹದ ಪಕ್ಕದಲ್ಲಿ ವಾಸಿಸುತ್ತಿದ್ದ ಎಂದು ನಮೂದು ಇದೆ ಎಂದರೆ ಸರಿ. ಸಾಕ್ಷಿ ಒಪ್ಪಿಕೊಂಡ ಮರುಹೇಳಿಕೆಯ ಭಾಗವನ್ನು ನಿಡಿ-1 ಎಂದು ಗುರುತಿಸಲಾಯಿತು.

ಆರೋಪಿ ಮತ್ತು ಚಾಸಾ-4 ರವರ ಮನೆ 20 ಫೀಟ್ ಅಂತರದಲ್ಲಿದೆ ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. ಚಿಂಚೋಳಿಯಿಂದ ಚಂದಾಪೂರಕ್ಕೆ ಹೋಗುವ ರಸ್ತೆಯಲ್ಲಿ ಎರಡು ಜುನಿಯರ್ ಕಾಲೇಜುಗಳಿಗೆ ಎಂದರೆ ಸಾಕ್ಷಿ ಒಂದು ಇದೆ ಎಂದು ನುಡಿಯುತ್ತಾರೆ. ಎಸ್.ಬಿ.ಐ. ಬ್ಯಾಂಕ್ ಎದುರು ಒಂದು ಜುನಿಯರ್ ಕಾಲೇಜು ಇದೆ ಎಂದರೆ ಸಾಕ್ಷಿ ಅದು ಪದವಿ ಮಹಾವಿದ್ಯಾಯಲಯ ಎಂದು ನುಡಿಯುತ್ತಾರೆ. ನಾನು ದೂರಿನಲ್ಲಿ ರಸ್ತೆಯ ಯಾವ ಭಾಗಕ್ಕೆ ಘಟನೆ ಆಗಿದೆ ಎಂದು ಉಲ್ಲೇಖವಿಲ್ಲ ಎಂದರೆ ಸಾಕ್ಷಿ ರಸ್ತೆಯ ಮೇಲೆ ಮೇಲೆ ಆಗಿದೆ ಎಂದು ಉಲ್ಲೇಖ ಇದೆ ಎಂದು ನುಡಿಯುತ್ತಾರೆ. ನಿಪಿ-2 ಮತ್ತು 3 ರ ಭಾವ ಚಿತ್ರಗಳನ್ನು ರಸ್ತೆಯ ಪಕ್ಕದಲ್ಲೆ ಪಡೆಯಲಾಗಿದೆ ಎಂದರೆ ಸಾಕ್ಷಿ ನಾನು ಕೈ ಸನ್ನೆ ಮಾಡಿ ರಸ್ತೆ ಮೇಲೆ ಆಗಿದೆ ಎಂದು ನಿಪಿ-2 ಮತ್ತು 3 ಭಾವ ಚಿತ್ರಗಳಲ್ಲಿ ತೋರಿಸಿದ್ದೇನೆ ಎಂದು ನುಡಿಯುತ್ತಾರೆ. ನಿಪಿ-2 ಮತ್ತು 3 ಭಾವ ಚಿತ್ರಗಳಲ್ಲಿಯೂ ಸಹ ನಾನು ಕೈ ಸನ್ನೆ ಮಾಡಿ ತೋರಿಸಿದ್ದು ರಸ್ತೆ ಪಕ್ಕದಲ್ಲಿ ಎಂದರೆ ಸರಿ.

ಪಂಚರಾದ ಚಾಸಾ-2 ಮತ್ತು 3 ರವರು ಚಿಂಚೋಳಿ ಪೊಲೀಸ್ ಠಾಣೆಯಲ್ಲಿ ಪ್ರತ್ಯೇಕ ಪ್ರಕರಣದಲ್ಲಿ ಪಂಚರಾಗಿದ್ದಾರೆ ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಚಾಸಾ-4 ರವರ ಚಾಲಕ ಚಾಸಾ-2 ರವರು ಇದ್ದರು ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಪ್ರಕರಣಕ್ಕೆ ಅನುಕೂಲವಾಗಲು ನಮ್ಮ ಠಾಣೆಯ ಆರೋಪಿತರಿಗೆ ಸಾಕ್ಷಿದಾರರಾಗಿ ಸೇರಿಸಿದ್ದೇವೆ ಎಂದರೆ ಸಾಕ್ಷಿ ತನಿಖೆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಆ ದಿನ ನಾನು ಮತ್ತು ಚಾಸಾ-4 ರವರು ಮಾಹಿತಿ ಕಲೆ ಹಾಕಲು ಮುಫ್ತಿಯಲ್ಲಿದ್ದೇವು. ಆ ದಿನ ನಾವು ಠಾಣೆಗೆ ಎಸ್.ಬಿ. ಕರ್ತವ್ಯಕ್ಕೆಂದು ಸಾಯಂಕಾಲ 08-00 ರಿಂದ 08-30 ಗಂಟೆಗೆ ಹೋಗಿರುತ್ತೇವೆ. ರಾತ್ರಿ 08-

00 ಗಂಟೆ ಸುಮಾರಿಗೆ ನನಗೆ ಎಸ್.ಬಿ. ಕರ್ತವ್ಯಕ್ಕೆ ನೇಮಿಸಿರುವ ಬಗ್ಗೆ ಈಗ ನೋಡುತ್ತಿರುವ ಅಭಿಯೋಜನೆ ಹಾಜರು ಪಡಿಸಿರುವ ಪೊಲೀಸ್ ಠಾಣೆಯ ದಿನಚರಿಯಲ್ಲಿ ಉಲ್ಲೇಖ ಇಲ್ಲ ಎಂದರೆ ಸಾಕ್ಷಿ ಬೆಳಿಗ್ಗೆ ಸಮಯಕ್ಕೆ ನೇಮಿಸಲಾಗಿತ್ತು ಎಂದು ನುಡಿಯುತ್ತಾರೆ. ರಾತ್ರಿ 08-00 ರಿಂದ 08-30 ಗಂಟೆಗೆ ನಾನು ಕರ್ತವ್ಯಕ್ಕೆ ಹೋಗಿದ್ದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ರಾತ್ರಿ 08-00 ಗಂಟೆಗೆ ಎಸ್.ಬಿ. ಕರ್ತವ್ಯಕ್ಕೆ ಹೋಗಿದ್ದರ ಬಗ್ಗೆ ಯಾವುದೇ ದಾಖಲೆ ಇಲ್ಲ ಎಂದರೆ ಸಾಕ್ಷಿ ಬೆಳಿಗ್ಗೆ ಮಾತ್ರ ನೇಮಿಸಿರುತ್ತಾರೆ ಎಂದು ನುಡಿಯುತ್ತಾರೆ.

ಜುನಿಯರ ಕಾಲೇಜ ಹತ್ತಿರ ಸಿ.ಸಿ. ಟಿವಿ ಕ್ಯಾಮೇರಾಗಳನ್ನು ಅಳವಡಿಸಿರುತ್ತಾರೆ ಎಂದರೆ ಸರಿಯಲ್ಲ. ಚುನಾವಣೆಯಲ್ಲಿ ಮತ ಏಣಿಕೆ ಜುನಿಯರ ಕಾಲೇಜಿನಲ್ಲೆ ಆಗುವ ಕಾರಣ ಚಿಂಚೋಳಿಯಲ್ಲೆ ಮೊಟ್ಟ ಮೊದಲು ಜುನಿಯರ ಕಾಲೇಜಿನಲ್ಲೆ ಸಿ.ಸಿ. ಟಿವಿ ಕ್ಯಾಮೇರಾಗಳನ್ನು ಅಳವಡಿಸಲಾಗಿತ್ತು ಎಂದರೆ ಸರಿಯಲ್ಲ. ಆರೋಪಿ ಯಾವುದೇ ಹಲ್ಲೆ ಮಾಡದೆ ಇರುವ ಕಾರಣ ಮುಖದ ಯಾವ ಭಾಗಕ್ಕೆ ಹಲ್ಲೆ ಮಾಡಲಾಗಿದೆ ಎಂದು ಉಲ್ಲೇಖ ಇಲ್ಲ ಎಂದರೆ ಸರಿಯಲ್ಲ. ಯಾವ ಭಾಗಕ್ಕೆ ಹಲ್ಲೆ ಮಾಡಲಾಗಿದೆ ಎಂದು ಬರೆಸಿದರೆ ಆಸ್ಪತ್ರೆ ದಾಖಲೆಯಲ್ಲಿ ಸತ್ಯಾಂಶ ಗೊತ್ತಾಗುತ್ತದೆ ಎಂದು ನನ್ನ ಮರುಹೇಳಿಕೆಯಲ್ಲಿ ಸುಳ್ಳು ಬರೆಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಪೊಲೀಸ್ ವಸತಿ ಗೃಹದ ಪಕ್ಕದಲ್ಲೆ ಇದ್ದರು ಸಹ ಅವನ ಬಗ್ಗೆ ಮಾಹಿತಿ ಇದ್ದರು ಸಹ ಸುಳ್ಳು ದೂರು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಚಾಸಾ-4 ರವರು ನನಗಿಂತ 10 ವರ್ಷ ಮೊದಲಿನಿಂದ ಚಿಂಚೋಳಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂದರೆ ಸಾಕ್ತಿ ಇರಬಹುದು ಎಂದು ನುಡಿಯುತ್ತಾರೆ. ಆರೋಪಿ ಹಾಗೂ ಆರೋಪಿಯ ತಂದೆ ಆಟೋ ಚಾಲಕ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಈಗ 5-6 ತಿಂಗಳ ಹಿಂದೆ ಆರೋಪಿ ಆಟೋ ಚಾಲಕ ಎಂದು ಗೊತ್ತಾಗಿದೆ. ನನ್ನ ಮರುಹೇಳಿಕೆಯಲ್ಲಿ ಆರೋಪಿ ಆಟೋ ಚಾಲಕ ಎಂದು ಹೇಗೆ ಹೇಳಿರುತ್ತಿರಿ ಎಂದು ಪ್ರಶ್ನೆಗೆ ಆರೋಪಿಗೆ ವಿಚಾರಣೆ ಮಾಡಿದಾಗ ಆಟೋ ಚಾಲಕ ಎಂದು ಹೇಳಿರುತ್ತಾನೆ ಮತ್ತು ಈಗ 5-6 ತಿಂಗಳ ಹಿಂದೆ ಆರೋಪಿ ಆಟೋ ಚಾಲಾಯಿಸುತ್ತಿರುವುದನ್ನು ಕಣ್ಣಾರೆ ನೋಡಿದ್ದೇನೆ ಎನ್ನುತ್ತಾರೆ.

ಆ ದಿನ ನಾವು ಆರೋಪಿಯಿಂದ ಹಫ್ತಾ ವಸೂಲಿ ಮಾಡುತ್ತಿದ್ದು ಮತ್ತು ಆರೋಪಿ ನಿರಾಕರಿಸಿದಕ್ಕಾಗಿ ಆರೋಪಿ ಮೇಲೆ ಸುಳ್ಳು ದೂರು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ಚಾಸಾ-4 ರವರು ಕರ್ತವ್ಯಕ್ಕೆ ಸೇರಿದಾಗಿನಿಂದ ಚಿಂಚೋಳಿ ತಾಲೂಕಿನಲ್ಲಿಯೇ ಕರ್ತವ್ಯ ಮಾಡುತ್ತಿದ್ದೇವೆ ಎಂದರೆ ಸಾಕ್ಷಿ ಎಸ್.ಪಿ. ರವರ ಆದೇಶದಂತೆ ನಾವು ಕರ್ತವ್ಯ ಮಾಡುತ್ತೇವೆ ಎಂದು ನುಡಿಯುತ್ತಾರೆ. ಈ ಪ್ರಕರಣದಲ್ಲಿ ಅಭಿಯಾಜನೆ ಸಲ್ಲಿಸಿದ ಠಾಣ ದಿನಚರಿಯಲ್ಲಿ ಒಬ್ಬ ವ್ಯಕ್ತಿಯ ಕೈಬರಹದಲ್ಲಿ ಬರೆಯಲಾಗಿದೆ ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಆರೋಪಿ ಹಫ್ತಾ ನಿರಾಕರಿಸಿದ ಕಾರಣ ಪೊಲೀಸ್ ಸಿಬ್ಬಂದಿರವರೆಲ್ಲಾ ಸೇರಿ ಆರೋಪಿ ವಿರುದ್ಧ ಪ್ರಕರಣ ದಾಖಲಿಸಿ ಈ ದಿನ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ

ಮುಖ್ಯ ವಿಚಾರಣೆಯಲ್ಲಿರುವ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**
**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**